**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1522 |
| 2 | ಸದಸ್ಯರ ಹೆಸರು | : ಶ್ರೀ ಬಸವನಗೌಡ ಬಾದರ್ಲಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | : 17.03.2026 |
| 4 | ಉತ್ತರಿಸುವವರು | : ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಟ್ಟಿ ಚಿನ್ನದ ಗಣಿ ಕಂಪನಿಯ 2024-25ನೇ ಆರ್ಥಿಕ ವರ್ಷದ ಲಾಭದ ಮೇಲಿನ ಒಟ್ಟು ಸಿ.ಎಸ್.ಆರ್ ಹಣವೆಷ್ಟು; | ಹಟ್ಟಿ ಚಿನ್ನದ ಗಣಿ ಕಂಪನಿಯ 2024-25ನೇ ಆರ್ಥಿಕ ವರ್ಷದ ಲಾಭದ ಮೇಲಿನ ಒಟ್ಟು ಸಿ.ಎಸ್.ಆರ್ ಹಣ ಮೊತ್ತ ರೂ.7.83 ಕೋಟಿಗಳಾಗಿರುತ್ತದೆ. |
| (ಆ) | ಸದರಿ ಸಿ.ಎಸ್.ಆರ್. ಹಣದ ಬಳಕೆಗೆ ಇರುವ ಮಾನದಂಡಗಳೇನು; | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ಕಂಪನಿ ಕಾಯ್ದೆ-2013ರ Schedule VII ರಲ್ಲಿ ವಿವರಿಸಿದ ಕಾರ್ಯಗಳು /ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆರೋಗ್ಯ , ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ CSR ಹಣವನ್ನು ಸರ್ಕಾರ ಸಂಸ್ಥೆಗಳಿಗೆ ಶೇ.75% ಹಾಗೂ ಖಾಸಗಿ ಸಂಸ್ಥೆಗಳಿಗೆ ಶೇ.25%ರಂತೆ ಹಾಗೂ ಸ್ಥಳೀಯ ರಾಯಚೂರು ಜಿಲ್ಲೆಗೆ ಶೇ.75 ರಷ್ಟು ಮತ್ತು ಶೇ.25 ರಷ್ಟು ಮೊತ್ತವನ್ನು ರಾಜ್ಯದ ಇತರೆ ಭಾಗಗಳಿಗೆ CSR ಸಮಿತಿಯ ಅನುಮೋದನೆ ಪಡೆದು ನಿಯಮಾನುಸಾರ ಬಿಡುಗಡೆ ಮಾಡಲಾಗುತ್ತದೆ. |
| (ಇ) | ನಿಯಮಗಳ ಪ್ರಕಾರ ಸ್ಥಳೀಯವಾಗಿ ಬಳಸಬೇಕಿರುವ ಸಿ.ಎಸ್.ಆರ್ ಅನುದಾನದ ಪಾಲೆಷ್ಟು; | 2024-25 ನೇ ಸಾಲಿನ ಹಟ್ಟಿ ಚಿನ್ನದ ಗಣಿ ಕಂಪನಿಯ ಸಿ.ಎಸ್.ಆರ್ ಹಣದಲ್ಲಿ ಸ್ಥಳೀಯವಾಗಿ ಕೈಗೊಳ್ಳಬೇಕಾಗಿರುವ ಶೇ.75ರಷ್ಟು ರೂ.5.88 ಕೋಟಿಗಳಾಗಿರುತ್ತದೆ. |
| (ಈ) | 2024-25ನೇ ಸಾಲಿನ ಹಟ್ಟಿ ಚಿನ್ನದ ಗಣಿ ಕಂಪನಿಯ ಸಿ.ಎಸ್.ಆರ್ ಹಣದಲ್ಲಿ ಸ್ಥಳೀಯವಾಗಿ ಯಾವ ಯಾವ ಕಾರ್ಯಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು) | 2024-25 ನೇ ಸಾಲಿನ ಹಟ್ಟಿ ಚಿನ್ನದ ಗಣಿ ಕಂಪನಿಯ ಸಿ.ಎಸ್.ಆರ್ ಹಣದಲ್ಲಿ ಸ್ಥಳೀಯವಾಗಿ ಕೈಗೊಳ್ಳಬೇಕಾಗಿರುವ ಶೇ.75ರಷ್ಟು ರೂ.5.88 ಕೋಟಿಗಳ ಸಂಬಂಧ ಮುಂದಿನ ಸಿ.ಎಸ್.ಆರ್ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಕಾರ್ಯಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುತ್ತದೆ. |

**ಸಂಖ್ಯೆ**: ಸಿಐ 77 ಸಿಎಂಸಿ 2026

**(ಎಸ್.ಎಸ್. ಮಲ್ಲಿಕಾರ್ಜುನ್)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು